ಸಾಕ್ಷಿಯನ್ನು ದಿಃ **02.07.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ 1, 4 ಮತ್ತು 5ನೇ ಪ್ರತಿವಾದಿಗಳ ಪರ ಶ್ರೀ ಬಿ.ಎಸ್.ವಕೀಲರಿಂದಃ-

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಹೆಸರಿಗೆ ಜಮೀನು ಮಾಡಬೇಕು ಎಂದು ಈ ದಾವೆ ಹಾಕಿದ್ದೇನೆ. ನನ್ನ ಅಣ್ಣನ ಮಕ್ಕಳು ನನ್ನ ತಂದೆ ಹೆಸರಿನಲ್ಲಿದ್ದ 2 ಎಕರೆ ಮತ್ತು ನನ್ನ ತಾಯಿಯ ಹೆಸರಿನಲ್ಲಿದ್ದ ಅರ್ಧ ಎಕರೆ ಜಮೀನಿನ ಬಗ್ಗೆ ಖಾತೆ ಮಾಡಿಸಿದ್ದಾರೆ ಆ ಬಗ್ಗೆ ದಾವಾ ಹಾಕಿದ್ದೇನೆ. ನಾವು ಬೇರೆಯಾಗಿ 10-12 ವರ್ಷ ಆಗಿರ ಬಹುದು. ಎಲ್ಲರ ಹೇಳಿಕೆ ಮೇರೆಗೆ ನಾವು ವಿಭಾಗ ಮಾಡಿಕೊಂಡೆವು. ನಮ್ಮ ಕುಟುಂಬದ ಆಸ್ತಿಗಳನ್ನು ಹಂಚಿಕೊಂಡು ಅವರವರ ಹೆಸರಿನಲ್ಲಿ ವಿಭಾಗ ಮಾಡಿಕೊಂಡೆವು.

ಈ ದಾವೆಯನ್ನು ನಾನು 6 ಜನ ಪ್ರತಿವಾದಿಯರ ವಿರುದ್ಧ ಹಾಕಿದ್ದೇನೆ. ಈ ದಾವೆಯಲ್ಲಿ ದಾಖಲೆಗಳನ್ನು ನಾನೇ ಹಾಜರುಪಡಿಸಿದ್ದೇನೆ. ನಿಪಿ-7ರ ಸರ್ವೇ ನಂ. 303/2ರ ಪಹಣಿಯನ್ನು ನಾನೇ ಹಾಜರುಪಡಿಸಿದ್ದೇನೆ. ನಿಪಿ-7ರ ಪಹಣಿಯಲ್ಲಿ ನಂಜಮಣಿ ಕೊಂ ಲೇಟ ಮಲ್ಲೀಕಾರ್ಜುನ, ಮೇಲಿನ ಜಂಟಿ ರಾಜಮಣಿ ಕೊಂ ಲೇಟ್ ಚಂದ್ರಪ್ರ ಮೇಲಿನ ಜಂಟಿ ಗುರುಮಲ್ಲಪ್ಪ ಬಿನ್ ಲೇಟ್ ದೊಡ್ಡಲಿಂಗಪ್ಪ ಮೇಲಿನ ಜಂಟಿ ಅವ್ವಯ್ಯಮ್ಮ ಕೊಂ ಲೇಟ್ ಸಣ್ಣಲಿಂಗಪ್ಪ, ಮೇಲಿನ ಜಂಟಿ ಶಿವಲಿಂಗಪ್ಪ ಬಿನ್ ಲೇಟ್ ಸಣ್ಣಲಿಂಗಪ್ಪ, ನಾಗರಾಜ ಬಿನ್ ದೇವಪ್ಪ ಉಃ ಕರಿಯಪ್ಪ ಮೇಲಿನ ಜಂಟಿ ಕಾಳಮ್ಮ ಕೊಂ ಲೇಟ ಪುಟ್ಟಸ್ವಾಮಪ್ಪ ಮೇಲಿನ ಜಂಟಿ ಅಂತ ನಮೂದಾಗಿದೆ ಎಂದರೆ ಸರಿ. ಸದರಿ ದಾವಾ ಷೆಡ್ಯೂಲ್ 6ನೇ ಆಸ್ತಿಯು ಮೇಲೆ ಹೇಳಿದ ಅಷ್ಟು ಜನರ ಹೆಸರಿನಲ್ಲಿ ಜಂಟಿಯಾಗಿದೆ ಎಂದರೆ ಸರಿ. ಈ ದಾವೆಯನ್ನು ನಾನು 1 ರಿಂದ 6ನೇ ಪ್ರತಿವಾದಿಯರನ್ನು ಹೊರತು ಪಡಿಸಿ ಬೇರೆಯವರ ವಿರುದ್ದ ಹಾಕಿಲ್ಲ. ಈ ದಾವೆಯಲ್ಲಿ ನಿಪಿ-7ರಲ್ಲಿ ನಮೂದಿಸಿದ ನಂಜಮಣಿ, ರಾಜಮಣಿ, ಅವ್ವಯ್ಯಮ್ಮ, ಶಿವಲಿಂಗಪ್ಪ, ನಾಗರಾಜ ಮತ್ತು ಕಾಳಮ್ಮರವರನ್ನು ಸೇರಿಸಿಲ್ಲ ಎಂದರೆ ಸರಿ.

ದಾವಾ ಷೆಡ್ಯೂಲ್ ಐಟಂ ನಂಬರ 3ಕ್ಕೆ ಸಂಬಂಧಿಸಿದ ಪಹಣಿಯನ್ನು ಹಾಜರು ಪಡಿಸಿದ್ದೇನೆ. ದಾವಾ ಷೆಡ್ಯೂಲ್ ಐಟಂ ನಂಬರ 3 ಸರ್ವೇ ನಂ. 25/1, 25/2 ಮತ್ತು

25/3 ಎಂದು ಮೂರು ಪೋಡಾಗಿದೆ ಎಂದರೆ ಸರಿ. ಸದರಿ 25/1ರಲ್ಲಿ 28 ಗುಂಟೆ ದೇವರಾಜಪ್ಪ ಬಿನ್ ರಾಜಪ್ಪ ಎಂಬುವವರ ಹೆಸರಿನಲ್ಲಿ ಖಾತೆ ಇದೆ ಎಂದರೆ ಇಲ್ಲ. ಸರ್ವೇ ನಂ. 25/2ರಲ್ಲಿ 28 ಗುಂಟೆಯ ಖಾತೆ ಸಿದ್ದಮ್ಮ ಕೊಂ ಅಣ್ಣಯ್ಯ ಮತ್ತು ಅವರ ಮಕ್ಕಳ ಹೆಸರಿನಲ್ಲಿ ಖಾತೆ ಇದೆ ಎಂದರೆ ಅದು ನಮ್ಮ ಜಮೀನಿನ ಪಕ್ಕದಲ್ಲಿ ಇದೆ. ಸರ್ವೇ ನಂ. 25/3 ರಲ್ಲಿ 28 ಗುಂಟೆ ಜಮೀನು ಖಾತೆ ದೇವರಾಜಪ್ಪ ಬಿನ್ ರಾಜಪ್ಪರವರ ಹೆಸರಿನಲ್ಲಿದೆ ಎಂದರೆ ಅದು ಪಕ್ಕದ ಜಮೀನಾಗಿದೆ.

ನನ್ನ ತಂದೆಯ ಹೆಸರು ದೊಡ್ಡನಿಂಗಪ್ಪ. ನನ್ನ ತಂದೆಯ ಹೆಸರಿನಲ್ಲಿರುವ ಪಹಣಿಗಳನ್ನು ಹಾಜರುಪಡಿಸಿದ್ದೇನೆ. ನಿಪಿ-2ರ ಪಹಣಿಯಲ್ಲಿ ನನ್ನ ತಾತನ ಹೆಸರಿಲ್ಲ. ನಿಪಿ-3ರ ಪಹಣಿಯಲ್ಲಿ ನನ್ನ ತಾತನ ಹೆಸರು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ತಾತನ ಹೆಸರನ್ನು ತೆಗೆದು ಅಣ್ಣನ ಹೆಸರಿನಲ್ಲಿ ಮಾಡಿಕೊಂಡಿದ್ದಾರೆ. ನಿಪಿ-5ರ ಪಹಣಿಯಲ್ಲಿ ನನ್ನ ತಂದೆಯ ಹೆಸರು ನಿಂಗಪ್ಪ ಎಂದು ನಮೂದಾಗಿದೆ. ನಿಂಗಪ್ಪ ಮತ್ತು ದೊಡ್ಡನಿಂಗಪ್ಪ ಬೇರೆ ಬೇರೆ ವ್ಯಕ್ತಿಗಳು ಎಂದರೆ ಬರೆಯುವಾಗ ತಪ್ಪಾಗಿ ನಿಂಗಪ್ಪ ಎಂದು ನಮೂದಿಸಿದ್ದಾರೆ. ನಿಪಿ-1ರ ವಂಶವೃಕ್ಷದ ಪ್ರಮಾಣ ಪತ್ರದಲ್ಲಿ ನನ್ನ ತಂದೆಯ ಹೆಸರು ದೊಡ್ಡನಿಂಗಪ್ಪ ಉಃ ನಿಂಗಪ್ಪ ಎಂದು ಬರೆಸಿಲ್ಲ. ನಿಪಿ-5ರ ಪಹಣಿಯಲ್ಲಿ ಕಾಣಿಸಿದ ನಿಂಗಪ್ಪ ಮತ್ತು ನಿಪಿ-1ರಲ್ಲಿ ಕಾಣಿಸಿದ ದೊಡ್ಡನಿಂಗಪ್ಪ ಹೆಸರು ಬೇರೆ ಬೇರೆ ಎಂದರೆ ಸರಿ. ನನ್ನ ತಾತನ ಹೆಸರು ಪಾಪಣ್ಣ. ನಿಪಿ-5ರ ಪಹಣಿಯಲ್ಲಿ ನಿಂಗಪ್ಪ ಎಂಬ ಹೆಸರನ್ನು ಹೊರತುಪಡಿಸಿ ಬೇರೆ ಯಾವುದೇ ಹೆಸರುಗಳಿಲ್ಲ ಎಂದರೆ ಸರಿ. ನಿಪಿ-6ರ ಪಹಣಿಯಲ್ಲಿ ನಿಮ್ಮ ತಂದೆಯ ಹೆಸರು ಇಲ್ಲ ಎಂದರೆ ಸಾಕ್ಷಿ ಸರಿಯಾಗಿ ಉತ್ತರಿಸುವುದಿಲ್ಲ.

ನಿಪಿ-8ರಲ್ಲಿ ಇರುವ ರತ್ನಮ್ಮ ಬಿನ್ ಲೇಟ್ ಪುಟ್ಟಸ್ವಾಮಪ್ಪ, ಶಿವಪ್ಪ ಬಿನ್ ಲೇಟ್ ಪುಟ್ಟಸ್ವಾಮಪ್ಪ, ಸುಂದರಮ್ಮ ಬಿನ್ ಲೇಟ್ ಪುಟ್ಟಸ್ವಾಮಪ್ಪ, ಜಗದೀಶ ಬಿನ್ ಲೇಟ್ ಪುಟ್ಟಸ್ವಾಮಪ್ಪ, ದಿನೇಶಕುಮಾರ ಬಿನ ಲೇಟ್ ಪುಟ್ಟಸ್ವಾಮಪ್ಪ, ಶಿವಲಿಂಗಪ್ಪ ಬಿನ್ ಸಣ್ಣನಿಂಗಯ್ಯ ಮತ್ತು ಗಿರೀಶ ಬಿನ್ ಲೇಟ್ ಚಂದ್ರಪ್ಪ ಈ ದಾವೆಯಲ್ಲಿ ಪಕ್ಷಗಾರರಲ್ಲ ಎಂದರೆ ಸರಿ. ನಿಪಿ-9 ರಲ್ಲಿರುವ ಎಂ.ಆರ್.ನಲ್ಲಿ ಕಾಣಿಸಿದ ಗೌಡ್ರ ಲಿಂಗಣ್ಣ ಬಿನ್ ಲಿಂಗಣ್ಣರವರು ನನ್ನ ತಾತನ ತಂದೆ. ನನ್ನ ಮುತ್ತಾತನಿಗೆ 10 ಜನ ಮಕ್ಕಳು. ನನ್ನ ಮುತ್ತಾತನ ಎಲ್ಲ ವಾರಸುದಾರರನ್ನು ಈ

ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನನ್ನ ತಂದೆ ದೊಡ್ಡಲಿಂಗಪ್ಪ ಬಿನ್ ಪಾಪಣ್ಣ ರವರ ಹೆಸರಿನಲ್ಲಿರುವ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ತಂದೆಯ ಹೆಸರಿನಲ್ಲಿ ದಾಖಲೆಗಳು ಇಲ್ಲದೇ ಇರುವ ಕಾರಣ ಅವುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಂದೆಯಿಂದ ಬಂದ ಆಸ್ತಿಗಳು ಅಲ್ಲದೇ ಇರುವ ಕಾರಣ ದಾಖಲಾತಿಗಳನ್ನು ಹಾಜರುಪಡಿಸಲು ಆಗಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.